ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 198

ಸದಸ್ಯರ ಹೆಸರು : ಶ್ರೀ ಎಂ.ಕೆ. ಪ್ರಾಣೇಶ್

ಉತ್ತರಿಸಬೇಕಾದ ಸಚಿವರು : ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 18-07-2019

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಚಿಕ್ಕಮಗಳೂರು ಜಿಲ್ಲೆಯ ಕೆ.ಎಸ್.ಆರ್.ಟಿ.ಸಿ ವಿಭಾಗದಲ್ಲಿ ಎಷ್ಟು ಬಸ್ಸುಗಳು ಇವೆ; (ಡಿಪೋವಾರು ಮಾಹಿತಿ ಒದಗಿಸುವುದು)	ಚಿಕ್ಕಮಗಳೂರು ಜಿಲ್ಲೆಯ ಕೆ.ಎಸ್.ಆರ್.ಟಿ.ಸಿ. ವಿಭಾಗದಲ್ಲಿ ಒಟ್ಟು 581 ಬಸ್ಸುಗಳಿವೆ. ಡಿಪೋವಾರು ಮಾಹಿತಿ ಈ ಕೆಳಕಂಡಂತಿರುತ್ತದೆ.

ಕ್ರ.ಸಂ.	ಘಟಕ	ಒಟ್ಟು ವಾಹನಗಳು
1	ಚಿಕ್ಕಮಗಳೂರು	144
2	ಅರಸೀಕೆರೆ	111
3	ಸಕಲೇಶಪುರ	101
4	ಕಡೂರು	97
5	ಮೂಡಿಗೆರೆ	86
6	ಬೇಲೂರು	42
	ಒಟ್ಟು	**581**

ಕ್ರ.ಸಂ	ಪ್ರಶ್ನೆ	ಉತ್ತರ
ಆ	ಕೆ.ಎಸ್.ಆರ್.ಟಿ.ಸಿ ಬಸ್ಸುಗಳನ್ನು ಎಷ್ಟು ವರ್ಷಗಳು ಮತ್ತು ಎಷ್ಟು ಕಿಲೋಮೀಟರ್ ಓಡಿಸಬೇಕೆಂಬ ನಿಯಮವಿದೆ;	ಕೆ.ಎಸ್.ಆರ್.ಟಿ.ಸಿ., ಸಾಮಾನ್ಯ ಬಸ್ಸುಗಳನ್ನು 9.00 ಲಕ್ಷ ಕಿ.ಮೀವರೆಗೆ ಹಾಗೂ ಪ್ರತಿಷ್ಠಿತ (ಕರೋನ, ವೋಲ್ವೋ, ಬೆಂಜ್, ಸ್ಕ್ಯಾನಿಯಾ) ಬಸ್ಸುಗಳನ್ನು 13.00 ಲಕ್ಷ ಕಿ.ಮೀವರೆಗೆ ಕಾರ್ಯಾಚರಣೆ ಮಾಡಬೇಕೆಂಬ ನಿಯಮವಿರುತ್ತದೆ. ವರ್ಷಗಳನ್ನು ಆಧರಿಸಿ ಕಾರ್ಯಾಚರಣೆ ಮಾಡಲು ಯಾವುದೇ ನಿಯಮಗಳಿರುವುದಿಲ್ಲ.
ಇ	ಚಿಕ್ಕಮಗಳೂರು ವಿಭಾಗದಲ್ಲಿ ಎಷ್ಟು ಅವಧಿ ಮುಗಿದ ಬಸ್ಸುಗಳು ಸಂಚರಿಸುತ್ತಿವೆ. ಅದಕ್ಕೆ ಕಾರಣಗಳೇನು; ಇದರಿಂದ ಪ್ರಯಾಣಿಕರಿಗೆ ತೊಂದರೆಯಾಗುವುದಿಲ್ಲವೆ; (ವಿವರ ನೀಡುವುದು)	ಚಿಕ್ಕಮಗಳೂರು ವಿಭಾಗದಲ್ಲಿ 9.00 ಲಕ್ಷ ಮೇಲ್ಪಟ್ಟು ಕಿ.ಮೀ. ಕ್ರಮಿಸಿರುವ ಒಟ್ಟು 298 ಬಸ್ಸುಗಳು ಕಾರ್ಯಚರಣೆ ಮಾಡುತ್ತಿರುತ್ತವೆ. ಸದರಿ ವಾಹನಗಳ ಯಾಂತ್ರಿಕ ಮತ್ತು ಕವಚದ ಸ್ಥಿತಿಗತಿಗಳು ಸುಸ್ಥಿತಿಯಲ್ಲಿರುವುದರಿಂದ ಕಾರ್ಯಾಚರಣೆಯಲ್ಲಿ ಮುಂದುವರೆಸಲಾಗಿರುತ್ತದೆ. ವಾಹನಗಳು ಕಾರ್ಯಾಚರಣೆಗೆ ಯೋಗ್ಯವಲ್ಲವೆಂದು ಕಂಡು ಬಂದ ಪ್ರಕರಣಗಳಲ್ಲಿ ನಿರುಪಯುಕ್ತಗೊಳಿಸಲಾಗುತ್ತಿದೆ. ಸಂಸ್ಥೆಯ ವಾಹನಗಳನ್ನು ಘಟಕದಲ್ಲಿ ಹಾಗೂ ವಿಭಾಗೀಯ ಕಾರ್ಯಾಗಾರದಲ್ಲಿ ನಿಗದಿತ ಮತ್ತು ಕಾಲಾವಧಿಯ ನಿರ್ವಹಣೆ ಮಾಡುವುದಲ್ಲದೆ ವಾಹನಗಳನ್ನು ಕಾರ್ಯಾಚರಣೆಗೆ ಯೋಗ್ಯವಾಗಿರುವ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಮುಂದೆ ಹಾಜರುಪಡಿಸಿ ಅರ್ಹತಾ ಪ್ರಮಾಣ ಪತ್ರವನ್ನು ಪಡೆದುಕೊಳ್ಳಲಾಗುತ್ತಿದೆ. ಮೇಲ್ಕಂಡ ಕ್ರಮಗಳನ್ನು ಕೈಗೊಂಡ ಪ್ರಯುಕ್ತ ಪ್ರಯಾಣಿಕರಿಗೆ ಯಾವುದೇ ರೀತಿಯ ತೊಂದರೆಯಾಗುತ್ತಿರುವುದಿಲ್ಲ.

ಈ	ಅವಧಿ ಮುಗಿದ ಬಸ್ಸುಗಳು ಓಡಿಸುತ್ತಿರುವ ಉದ್ದೇಶವೇನು; ಇದರಿಂದ ಆಗುವ ಅನಾಹುತಕ್ಕೆ ಯಾರು ಹೊಣೆ;	ವಾಹನಗಳ ಯಾಂತ್ರಿಕ ಮತ್ತು ಕವಚದ ಸ್ಥಿತಿಗತಿಗಳು ಸುಸ್ಥಿತಿಯಲ್ಲಿರುವುದರಿಂದ ಕಾರ್ಯಾಚರಣೆಯಲ್ಲಿ ಮುಂದುವರೆಸಲಾಗಿರುತ್ತದೆ. ವಾಹನಗಳು ಕಾರ್ಯಾಚರಣೆಗೆ ಯೋಗ್ಯವಲ್ಲವೆಂದು ಕಂಡು ಬಂದ ಪ್ರಕರಣಗಳಲ್ಲಿ ವಾಹನಗಳನ್ನು ನಿರುಪಯುಕ್ತಗೊಳಿಸಲಾಗುತ್ತಿದೆ. ವಾಹನಗಳ ಯಾಂತ್ರಿಕ ದೋಷದಿಂದ ಯಾವುದೇ ಅಪಘಾತ/ ಅವಘಡಗಳು ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಲಾಗುತ್ತಿದೆ.
ಉ	ಚಿಕ್ಕಮಗಳೂರು ಕೆ.ಎಸ್.ಆರ್.ಟಿ.ಸಿ ಬಸ್ಸ್ ನಿಲ್ದಾಣಗಳಲ್ಲಿ ಕಾರ್ಯನಿರ್ವಹಿಸುವ ಟಿ.ಸಿ.ಗಳು ಸಾರ್ವಜನಿಕರಿಗೆ ಸರಿಯಾಗಿ ಮಾಹಿತಿ ನೀಡದೆ ಹಾಗೂ ಸಾರ್ವಜನಿಕರ ಜೊತೆ ಅಸಭ್ಯವಾಗಿ ವರ್ತಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಾದಲ್ಲಿ ಕೈಗೊಂಡಿರುವ ಕ್ರಮಗಳೇನು;	ಚಿಕ್ಕಮಗಳೂರು ವಿಭಾಗದ ವ್ಯಾಪ್ತಿಗೆ ಬರುವ ಬಸ್ ನಿಲ್ದಾಣಗಳಲ್ಲಿ ನಿಯೋಜಿಸಿರುವ ಸಂಚಾರ ನಿಯಂತ್ರಕರನ್ನು ವಿಭಾಗ ಮತ್ತು ಕೇಂದ್ರ ತರಬೇತಿ ಕೇಂದ್ರಗಳಿಗೆ ನಿಯೋಜಿಸಿ, ಸಾರ್ವಜನಿಕ ಪ್ರಯಾಣಿಕರೊಂದಿಗೆ ಸಭ್ಯವಾಗಿ ವರ್ತಿಸುವಂತೆ ಹಾಗೂ ಸಾರ್ವಜನಿಕ ಪ್ರಯಾಣಿಕರೊಂದಿಗೆ ಉತ್ತಮ ರೀತಿಯಲ್ಲಿ ನಡೆದುಕೊಳ್ಳುವಂತೆ ತಿಳುವಳಿಕೆ ನೀಡಲಾಗುತ್ತಿದೆ. ಚಿಕ್ಕಮಗಳೂರು ವಿಭಾಗೀಯ ಕಛೇರಿಯಲ್ಲಿ ಆಗಿಂದಾಗ್ಗೆ ಸಂಚಾರ ನಿಯಂತ್ರಕರ ಸಭೆಯನ್ನು ನಡೆಸಿ ಸಾರ್ವಜನಿಕ ಪ್ರಯಾಣಿಕರೊಂದಿಗೆ ಸೌಜನ್ಯದಿಂದ ನಡೆದುಕೊಳ್ಳುವಂತೆ ಸೂಕ್ತ ತಿಳುವಳಿಕೆ ನೀಡಲಾಗುತ್ತಿದೆ. ಸಂಚಾರ ನಿಯಂತ್ರಕರ ಕರ್ತವ್ಯದಲ್ಲಿ ಲೋಪ ಅಥವಾ ಅಸಭ್ಯವಾಗಿ ವರ್ತಿಸಿರುವ ಪ್ರಕರಣಗಳಲ್ಲಿ ವಿಚಾರಣೆ ನಡೆಸಿ, ಪ್ರಕರಣದ ತೀವ್ರತೆಯನ್ನಾಧರಿಸಿ, ದಂಡ ವಿಧಿಸಲು ಅಥವಾ ಎಚ್ಚರಿಕೆ ನೀಡಲು ಕ್ರಮ ವಹಿಸಲಾಗಿದೆ.
ಊ	ಜಿಲ್ಲೆಯ ಕೆ.ಎಸ್.ಆರ್.ಟಿ.ಸಿ ಬಸ್ಸ್ ನಿಲ್ದಾಣದಲ್ಲಿ ಕುಡುಕರು ಮತ್ತು ಭಿಕ್ಷುಕರ ಸಂಖ್ಯೆ ಹೆಚ್ಚಾಗಿ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಾದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)	ಚಿಕ್ಕಮಗಳೂರು ಜಿಲ್ಲೆಯ ಬಸ್ ನಿಲ್ದಾಣದಲ್ಲಿ ಕಂಡುಬರುವ ಕುಡುಕರು ಮತ್ತು ಭಿಕ್ಷುಕರನ್ನು ನಿಯಂತ್ರಿಸಲು ಬಸ್ ನಿಲ್ದಾಣದ ಸಂಚಾರ ನಿಯಂತ್ರಕರು ಮತ್ತು ಭದ್ರತಾ ರಕ್ಷಕರುಗಳು ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ನಿಲ್ದಾಣದಿಂದ ಹೊರಗೆ ಕಳುಹಿಸುವ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಹಾಗೂ ಬಸ್ ನಿಲ್ದಾಣದಲ್ಲಿ ಕಂಡು ಬರುವ ಭಿಕ್ಷುಕರನ್ನು ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳ ಸಹಕಾರದೊಂದಿಗೆ ನಿರಾಶ್ರಿತರ ಕೇಂದ್ರಗಳಿಗೆ ಕಳುಹಿಸಲಾಗುತ್ತಿದೆ.

ಸಂಖ್ಯೆ: ಟಿಡಿ 31 ಟಿಸಿಕ್ಯೂ 2019

(ಡಿ.ಸಿ.ತಮ್ಮಣ್ಣ)
ಸಾರಿಗೆ ಸಚಿವರು